10/5/15 PV

### ಅಕ್ರಮ-ಸಕ್ರಮ ಮನೆಗಳ ಸಂಪರ್ಕ ರಸ್ತೆ ಬಂದ್: ಆತಂಕ

# ತಡೆಗೋಡೆ ತೆರವಿಗಾಗಿ ನಿವಾಸಿಗಳ ಮನವಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ಗೋಕುಲ ರಸ್ತೆಯ ರೇಣುಕಾನಗರದ ರಾಯರ ಮಠದ ಬಳಿಯ ಅಕ್ರಮ-ಸಕ್ರಮ ಮನೆಗಳಿಗೆ ಸಂಪರ್ಕ ರಸ್ತೆಯನ್ನು ಬಂದ್ ಮಾಡಲು ಹಾಕಲಾಗಿರುವ ತಡೆಗೋಡೆಯನ್ನು ಕೂಡಲೇ ತೆರವುಗೊಳಿಸಬೇಕು ಎಂದು ಶಾಸಕ ಅರವಿಂದ ಬೆಲ್ಲದ ಅವರನ್ನು ಸ್ಥಳೀಯರು ಒತ್ತಾಯಿಸಿದರು.

ಅಕ್ರಮ-ಸಕ್ರಮದಾರರು ವಾಸಿಸುತ್ತಿರುವ ಮನೆಗಳ ಸುತ್ತಲೂ ಶನಿವಾರ ಬೆಳಿಗ್ಗೆ ತಡೆಗೋಡೆ ಹಾಕಲು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ) ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಅಧಿಕಾರಿಗಳು ಮುಂದಾದರು. ಇದಕ್ಕೆ ಸ್ಥಳೀಯರು ಆಕ್ಷೇಪ ವ್ಯಕ್ತಪಡಿಸಿದರು. ಪೊಲೀಸ್ ಬಂದೋಬಸ್ತ್ ನಡುವೆ ತಡೆಗೋಡೆ ನಿರ್ಮಾಣ ಮಾಡಲಾಯಿತು.

**ಮುಖ್ಯಾಂಶಗಳು**

- ಅಕ್ರಮ-ಸಕ್ರಮದಾರರಿಗೆ ಪರಿಹಾರಕ್ಕೆ ಒತ್ತಾಯ
- ಶೀಘ್ರವೇ ಪುನರ್ವಸತಿ ಕಲ್ಪಿಸಲು ಆಗ್ರಹ

ಇದರಿಂದ ಕುಪಿತರಾದ ಸ್ಥಳೀಯ ನಿವಾಸಿಗಳು ಕೂಡಲೇ ಶಾಸಕ ಅರವಿಂದ ಬೆಲ್ಲದ ಅವರಿಗೆ ದೂರವಾಣಿ ಕರೆ ಮಾಡಿ ತಾವು ಅನುಭವಿಸುತ್ತಿರುವ ಸಮಸ್ಯೆಯನ್ನು ತೋಡಿಕೊಂಡರು. ಮನೆಗೆ ಬಂದರೆ ಚರ್ಚಿಸುವುದಾಗಿ ತಿಳಿಸಿದ್ದರಿಂದ ಸುಮಾರು 150ಕ್ಕೂ ಹೆಚ್ಚು ಅಕ್ರಮ-ಸಕ್ರಮದಾರರು ನಗರದ ಅಕ್ಷಯ ಪಾರ್ಕ್ ಬಳಿ ಇರುವ ಶಾಸಕರ ಮನೆಗೆ ತೆರಳಿದರು.

'ಕಳೆದ ಹಲವಾರು ವರ್ಷಗಳಿಂದ ವಾಸಿಸುತ್ತಿರುವ ಅಕ್ರಮ ಸಕ್ರಮದಾರರು ಓಡಾಡದಂತೆ ವಿಮಾನ ನಿಲ್ದಾಣ ಪ್ರಾಧಿಕಾರ ಮತ್ತು ಕೆಐಎಡಿಬಿಯವರು ಸುತ್ತಲೂ ತಡೆಗೋಡೆ ಹಾಕಿ ತೊಂದರೆ ನೀಡುತ್ತಿದ್ದಾರೆ. ಒಟ್ಟು 79 ಜನರ ಪೈಕಿ 53 ಮಂದಿಗೆ ಮಾತ್ರ ಪರಿಹಾರ ನೀಡಲಾಗಿದೆ. ಕೆಐಎಡಿಬಿ ಅವರು ಮಾಡಿದ ತಪ್ಪಿನಿಂದಾಗಿ 27 ಮಂದಿಗೆ ಇದುವರೆಗೂ ಪರಿಹಾರ ದೊರಕಿಲ್ಲ. ಅಲ್ಲದೇ, ಮನೆಗಳನ್ನು ಕಟ್ಟಿಕೊಳ್ಳದೆ ಖಾಲಿ ನಿವೇಶನಗಳನ್ನು ಬಿಟ್ಟುಕೊಂಡಿರುವ 190 ಮಂದಿಗೆ ಪುನರ್ವಸತಿ ಕಲ್ಪಿಸಬೇಕು' ಎಂದು ನೇತೃತ್ವ ವಹಿಸಿದ್ದ ರಘೋತ್ತಮ ಕುಲಕರ್ಣಿ ಶಾಸಕರನ್ನು ಒತ್ತಾಯಿಸಿದರು.

ಸಮಸ್ಯೆಗಳನ್ನು ಆಲಿಸಿದ ಶಾಸಕ ಅರವಿಂದ ಬೆಲ್ಲದ 'ಪರಿಹಾರ ನೀಡುವ ಬದಲು ಜಗದೀಶನಗರದಲ್ಲಿ ಆಶ್ರಯ ಮನೆಗಳನ್ನು ನೀಡಲು ಪ್ರಯತ್ನಿಸಲಾಗುವುದು. 27 ಮಂದಿಗೆ ಮೂರು ದಿನಗಳ ಒಳಗೆ ಪರಿಹಾರ ಒದಗಿಸಲು ಕೆಐಎಡಿಬಿ ಅಧಿಕಾರಿಗಳೊಂದಿಗೆ ಚರ್ಚಿಸುತ್ತೇನೆ' ಎಂದು ಭರವಸೆ ನೀಡಿದರು.